ಈ ದಿನ ದಿನಾಂಕಃ23-02-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಕೆ ಜಿ ಎಸ್ ವಕೀಲರಿಂದಃ**

ಈ ದಾವೆಯನ್ನು ನಾನು ನಿಪಿ-1 ರ ಆಧಾರದ ಮೇಲೆ ಹೂಡಿರುತ್ತೇನೆ. ಈಗಿರುವ ಸರ್ವೆ ದಾಖಲೆಗಳಿಗೂ ಮತ್ತು ಸ್ವಾಧೀನಾನುಭವದಲ್ಲಿರುವ ಅಳತೆಗಳಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸದರಿ ಸರ್ವೆ ಅಳತೆಯ ದಾಖಲೆಗಳಂತೆ ಸ್ವಾಧೀನಾನುಭವ ಬೇರೆ ಬೇರೆಯವರಿಗೆ ವ್ಯತ್ಯಾಸವಾಗುತ್ತದೆ ಎಂದರೆ ನನ್ನ ದಾಖಲೆ ಪ್ರಕಾರ ಎಲ್ಲಿ ಬಂದರೂ ಅಲ್ಲಿಯೇ ಪಡೆಯುತ್ತೇನೆ. ಹಾಗಾಗಿ ಸರ್ವೆ ಪೋಡು ಇನ್ನೂ ಅಧಿಕೃತವಾಗಿ ಅಕ್ಯೆರು ಆಗಿಲ್ಲ ಎಂದರೆ ಸರಿ. ನಾನು ದಾವಾಸ್ತಿ ಪ್ರತಿವಾದಿಗಳ ಸ್ವಾಧೀನಕ್ಕೆ ಈಗಿರುವ ಸರ್ವೆ ಅಳತೆ ಪ್ರಕಾರ ಹೋಗುತ್ತದೆ ಎಂದು ಈ ದಾವೆ ಹೂಡಿದ್ದೆನೆ ಎಂದರೆ ಸರಿ. ಹಾಗಾಗಿ ಸದರಿ ಸರ್ವೆ ಅಂತಿಮವಾಗಿ ಅಕ್ಯೆರು ಆಗುವವರೆಗೂ ಇಂತಹ ಜಮೀನು ಇಂತಹವರದ್ದೆಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಡಿ ಡಿ ಎಲ್ ಆರ್ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ W.P ಸಲ್ಲಿಸಿದ್ದು ಸದರಿ W.P ನ ಆದೇಶವಾದ ನಂತರ ಹೊಸದಾಗಿ ಅಳತೆಯನ್ನು ಮಾಡಿಸಿ ನಂತರ ದಾವೆಯನ್ನು ಹೂಡಬೇಕಿತ್ತು ಎಂದರೆ ಸರಿಯಲ್ಲ. ಅದರಂತೆ ಪೋಡುರದ್ದಿಗಾಗಿ ಡಿ ಡಿ ಎಲ್ ಆರ್ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಹೂಡಿದ ಪ್ರಕರಣ ವಜಾ ಆದ ಕಾರಣ ಮಾನ್ಯ ಉಚ್ಚ ನ್ಯಾಯಾಲಯಕ್ಕೆ W.P ಸಲ್ಲಿಸಿರುತ್ತೇನೆ. ಹಾಲಿ ಪೋಡುಗಳು ರದ್ದತಿಯಾದ ನಂತರ ಹೊಸದಾಗಿ ಪೋಡು ಅಳತೆ ಆದನಂತರ ದಾವೆ ಸಲ್ಲಿಸಬೇಕಿತ್ತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳಿಗೆ ಸೇರಿದ ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಡಿ ಡಿ ಎಲ್ ಆರ್ ನ್ಯಾಯಾಲಯದಲ್ಲಿ ಆದ ಆದೇಶವನ್ನಾಗಲಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆದ ಆದೇಶವಾನ್ನಾಗಲಿ ಮತ್ತು

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ WP ಯ ದಾಖಲೆಗಳನ್ನಾಗಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಕೇಳದಕಾರಣ ನಾನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯನ್ನು ನಿಪಿ-1 ರಲ್ಲಿನ ಚೆಕ್ಕುಬಂದಿಯಾಧಾರದ ಮೇಲೆ ಸದರಿ ದಾವೆ ಹೂಡಿದ್ದೆನೆ ಎಂದರೆ ಸರಿ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.